ಗಳನ್ನು ಹಾಕಿಸಿ, ಬೇಸಾಯ ಮಾಡುವುದಕ್ಕೆ ಸಹಾಯ ಮಾಡಬೇಕೆಂದೇನಾದರೂ ಯೋಚನೆ ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಬಾವಿಗಳನ್ನು ನಾವೇ ತೆಗೆಯಿಸುವ ಯೋಚನೆ ಮಾಡಿಲ್ಲ. ಈಗ ಎಲ್ಲೆಲ್ಲಿ ಕರೆಂಟ್ ಇದ್ದು ಬಾವಿಗಳಿವೆಯೋ ಅವುಗಳಿಗೆ ಪಂಪು ಹಾಕಿಸಿಕೊಡುವ ಏರ್ಪಾಡು ಮಾಡಿದ್ದೇವೆ. ಇದಕ್ಕಾಗಿಯೇ ಒಬ್ಬರು ಸ್ಪೆಷಲ್ ಆಫೀಸರನ್ನು ನೇಮಕಮಾಡಿದ್ದೇವೆ. ಇವರು ಎಲ್ಲೆಲ್ಲಿ ಎಲೆಕ್ಟ್ರಿಸಿಟಿ ಕೊಟ್ಟಿದೆಯೋ ಆಲ್ಲೆಲ್ಲಾ ಅದರ ಪ್ರಯೋಜನವನ್ನು ಪೂರ್ತಿಯಾಗಿ ಪಡೆಯುವುದಕ್ಕೆ ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡುತ್ತಾರೆ. ಮೋಟಾರ್ ಹಾಕುವುದು, ಪಂಪುಗಳನ್ನು fix ಮಾಡುವುದು ಮುಂತಾದುವುಗಳನ್ನು loan basisನಲ್ಲಿ ಒದಗಿಸಬೇಕೆಂದು ಯೋಚನೆ ಮಾಡಿದ್ದೇವೆ.

ಶ್ರೀ ಎಚ್. ಎಸ್. ರುದ್ರಪ್ಪ.— ಈ ಕೆಲಸವನ್ನು ಯಾವುದಾದರೂ ಫರ್ಮಿಗೆ ವಹಿಸಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ. ಸರ್ಕಾರದವರೇ ಮಾಡುತ್ತಿದ್ದಾರೆ.

Supply of seed paddy on credit basis in Shimoga District.

Q.—125. Sri H. S. RUDRAPPA (Honnali).—

Will the Government be pleased to state :—

(*a*) whether any representations have been made to them to give seed paddy to the raiyats on credit basis in the distress areas of Shimoga District ;

(*b*) if so, what action has been taken in this direction ?

A.—Sri H. SIDDAVEERAPPA (Minister for Home and Industries).—

(*a*) Yes.

(*b*) Government have sanctioned in their Order No. A.F. 2641-45—Agri. 25-53-2, dated 11th June 1953, the issue of seed paddy on credit basis in deserving cases up to a limit of Rs. 50 in each individual case, subject to the conditions and the procedure prescribed for the grant of manure loans in G.O. No. A.F. 2873-83—Agri. 14-50-3, dated 23rd June 1950.

The concerned authorities have been requested to take needful action in the matter.

ಶ್ರೀ ಎಚ್. ಎಸ್. ರುದ್ರಪ್ಪ.—ಬೀಜದ ಬತ್ತವನ್ನು 50 ರೂಪಾಯಿಗಳವರೆಗೆ ಸಾಲವಾಗಿ ಕೊಡಬೇಕೆಂದು ಗೊತ್ತುಮಾಡಿರುವುದಾಗಿ ತಿಳಿಸಿದ್ದೀರಿ. ಯಾವ ಆದಾರದ ಮೇಲೆ 50 ರೂಪಾಯಿಗಳವರೆಗೆ ಕೊಡಬೇಕೆಂದು ಗೊತ್ತುಮಾಡಿದ್ದೀರಿ ?

*ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ಹಣಕಾಸಿನ ಆಯಕಟ್ಟನ್ನು ನೋಡಿಕೊಂಡರೆ ನಮಗೆ ಅಷ್ಟೇ ಕೊಡುವುದಕ್ಕೆ ಅವಕಾಶವಿರುವುದು. ಅಷ್ಟನ್ನು ಕೊಟ್ಟಿದ್ದೇವೆ.

ಶ್ರೀ ಎಚ್. ಎಸ್. ರುದ್ರಪ್ಪ.—ಕ್ಷಾಮಪ್ರದೇಶದಲ್ಲಿ ಬೀಜದ ಬತ್ತ ಕೊಡವೆಯಿದ್ದರೆ ಬೀಜ ಹಾಕುವುದೇ ಕಷ್ಟವಾಗುತ್ತಿದೆಂಬುದನ್ನು ತಮ್ಮ ಇಲಾಖೆಯ ಅಧಿಕಾರಿಗಳಿಂದ ತಿಳಿದಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ತಿಳಿದಿದ್ದೇವೆ. ಆದರೆ cash basis ಮೇಲೆ ಅಲ್ಲದೆ ಸಾಲದ ರೂಪದಲ್ಲಿ ನಾವು ನಮ್ಮ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ 50 ರೂಪಾಯಿಗಳ ಮೇಲೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—50 ರೂಪಾಯಿಗಳ ಬತ್ತ ಎಷ್ಟು ಎಕರೆಗೆ ಆಗಬಹುದೆಂದು ಅಂದಾಜು ಮಾಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಎಚ್. ಎಸ್. ರುದ್ರಪ್ಪ.—ಅದು ಒಂದೂವರೆ–ಅಥವಾ ಎರಡು ಎಕರೆಗಳ ಮೇಲೆ ಆಗುವುದಿಲ್ಲವೆಂದು ಗೊತ್ತಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ನೋಟೀಸ್.

ಶ್ರೀ ಎಚ್. ಎಸ್. ರುದ್ರಪ್ಪ.—ಹಾಗಾದರೆ, ಈ ಪ್ರದೇಶದಲ್ಲಿ ಬಹಳ ದಿವಸಗಳಿಂದ ಎಷ್ಟೋ ಎಕರೆಗಳನ್ನು ಬೀಜ ಹಾಕದೆ ಹಾಗೆಯೇ ಬಿಟ್ಟಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

Sri H. SIDDAVEERAPPA.—Yes, I have received a report that due to recent floods there is some trouble in some areas.

ಶ್ರೀ ಎಚ್. ಎಸ್. ರುದ್ರಪ್ಪ.—ಈಗ ಮಳೆ ಬಂದ ಮೇಲೆ ಹಾಕಿದ್ದ ಲಕ್ಷಾಂತರ ರೂಪಾಯಿಗಳ ಬಿತ್ತನೆಯೆಲ್ಲಾ ಲುಕ್ಸಾನಾಗಿ ಈಗ ಮತ್ತೆ ಬಿತ್ತುವುದಕ್ಕೆ ಬೀಜ ಕೂಡ ಇಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕಾಗಿ 2,000 ಪಲ್ಲ ಬತ್ತವನ್ನು ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಕೊಡಬೇಕೆಂದು ಹೇಳಿದ್ದೇವೆ.

ಶ್ರೀ ಎಚ್. ಎಸ್. ರುದ್ರಪ್ಪ.—ನೀವು ಕಳುಹಿಸಿದ್ದೀರಿ, ನಿಜ. ಆದರೆ ಅಲ್ಲಿನ ಜನರಿಗೆ ಕೊಳ್ಳುವುದಕ್ಕೂ ತಾಕತ್ತಿಯಿಲ್ಲದೆ, ಬಿತ್ತುವುದಕ್ಕೂ ಸಾಧ್ಯವಿಲ್ಲದೆ ಜಮೀನೆಲ್ಲಾ ಹಾಗೆಯೇ ಬಿತ್ತದೆ ನಿಂತಿದೆಯೆಂಬುದು ತಮಗೆ ಗೊತ್ತಿದೆಯೇ ?

Sri H. SIDDAVEERAPPA.—I am not able to improve on what I have already said. I will examine it still further.

ಶ್ರೀ ಎಚ್. ಎಸ್. ರುದ್ರಪ್ಪ.—ಬೀಜದ ಬತ್ತವನ್ನು ಈಗ ಪೂರ್ತಿಯಾಗಿ ಸಾಲವಾಗಿ ಒದಗಿಸದೆ ಹೋದರೆ ಅವರು ಈ ಸಾರಿ ಬಿತ್ತುವುದಕ್ಕೆ ಆಗುವುದಿಲ್ಲವೆಂಬ ಅಂಶವನ್ನು ನೋಡಿಕೊಡುತ್ತೀರಾ ?

Sri H. SIDDAVEERAPPA.—I will examine it.

ಶ್ರೀ ಎಚ್. ಎಸ್. ರುದ್ರಪ್ಪ.—ಒಂದು ವೇಳೆ ಈಗ ಮಳೆ ಬಂದರೆ ಸಾಲದ ರೂಪದಲ್ಲಿ 50 ರೂಪಾಯಿಗಳಿಗಿಂತಲೂ ಹೆಚ್ಚಿಗೆ ಹಣ ಕೊಡಬೇಕಾಗುತ್ತದೆಂದು ಮುಂದಾಲೋಚನೆ ಮಾಡಿ ಒದಗಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ವಿಚಾರಮಾಡೋಣ.

ಶ್ರೀ ಎಸ್. ಗೋಪಾಲಗೌಡ.—ಬೀಜವನ್ನು 2,000 ಪಲ್ಲಗಳನ್ನು ಆ ಪ್ರದೇಶದಲ್ಲಿ ಹಾಕಿದರೆ ಸಾಕಾಗುತ್ತದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—3,200 ಪಲ್ಲಗಳನ್ನು ಮೊದಲೇ ಕೊಟ್ಟಿರುವುದು ತಮಗೆ ಗೊತ್ತಿದೆ. ಅದಾದ ಮೇಲೆ ಈಗ 2,000 ಪಲ್ಲ ಕೊಡುತ್ತಿದ್ದೇವೆ. ಅದು ಖರ್ಚಾದಮೇಲೆ ಇನ್ನೂ ಬೇಕೆಂದು ಹೇಳಿದರೆ ಬತ್ತದ ಜ ಒದಗಿಸುತ್ತೇವೆ.

ಬೀಶ್ರೀ ಎಸ್. ಗೋಪಾಲಗೌಡ.—ರೈತರಿಂದ ಹಣ ತೆಗೆದುಕೊಳ್ಳದೆ ಅವರನ್ನೇ ನಂಬಿ ಈಗ ಯಾರು ಪಹಣಿ ಮಾಡಿದ್ದಾರೋ, ಯಾರ ಡಿಪೋವಿಗೆ ಈಗ ಅವರು ಹಾಕುತ್ತಿದ್ದಾರೋ ಅವರ ಸೆಕ್ಯೂರಿಟಿಯಮೇಲೆ ಬೀಜದ ಬತ್ತವನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—I will examine it further ಎಂದು ಆಗಲೇ ಹೇಳಿದ್ದೇನೆ.

Relief granted to the family of Arakere Mala who died in Krishnarajanagar Police Lock-up.

Q.—149. Sri S. H. THAMMIAH (Krishnarajanagar).—

Will the Government be pleased to state:—

the relief granted to the family of one Arakere Mala who died at Krishnarajanagar Police Lock-up ?

A.—Sri H. SIDDAVEERAPPA (Minister for Home and Industries).—

Mala died on the pial of the Police Station and not in the Police lock-up. The post-mortem examinations disclosed that the death was due to suicidal strangulation. The Munsiff-Magistrate who held the inquest over the dead body gave the verdict that the case was one of suicide. Hence no further action was necessary.

In view of the above, the question of relief does not arise.

ಶ್ರೀ ಎಸ್. ಎಚ್. ತಮ್ಮಯ್ಯ.—ಅವನು ಸತ್ತು ಹೋದಾಗ ಪೋಲೀಸಿನವರ ವಶದಲ್ಲಿದ್ದನೇ ?

*ಶ್ರೀ ಎಚ್. ಸಿದ್ದವೀರಪ್ಪ.—ಪೋಲೀಸಿನವರ ವಶದಲ್ಲಿದ್ದ. ಆದರೆ ಅವನನ್ನು ದಸ್ತಗಿರಿ ಮಾಡಿರಲಿಲ್ಲ.

ಶ್ರೀ ಎಸ್. ಎಚ್. ತಮ್ಮಯ್ಯ.—ಪೋಲೀಸಿನವರ ವಶದಲ್ಲಿಲ್ಲದೆ ಬೇರೆ ಕಡೆ ಸತ್ತಿದ್ದರೆ ಮ್ಯಾಜಿಸ್ಟ್ರೇಟರು ಮಹಜರ್ ಮಾಡುತ್ತಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—Inquest proceedings ನ್ನು ಮ್ಯಾಜಿಸ್ಟ್ರೇಟರೇ ಮಾಡಬಹುದೆಂದು ತಮಗೇ ಗೊತ್ತಿದೆ. ಇವನು ಆ ದಿವಸ ಪೋಲೀಸ್ ಸ್ಟೇಷನ್ನಿನ ವರಾಂಡಾದಲ್ಲಿಯೇ ಸತ್ತಿದ್ದರಿಂದ safety ಗಾಗಿ ಮ್ಯಾಜಿಸ್ಟ್ರೇಟರೇ ಮಹಜರ್ ಮಾಡಿದ್ದಾರೆ.

ಶ್ರೀ ಎಸ್. ಎಚ್. ತಮ್ಮಯ್ಯ.—ದಸ್ತಗಿರಿ ಮಾಡದೆ ಅವನನ್ನೇಕೆ ಪೋಲೀಸ್ ಸ್ಟೇಷನ್ನಿಗೆ ತೆಗೆದುಕೊಂಡು ಹೋದರು ?

Sri H. SIDDAVEERAPPA.—He was under police surveillance.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಪೋಲೀಸ್ ಸ್ಟೇಷನ್ನಿಗೇಕೆ ಅವನನ್ನು ಕರೆದುಕೊಂಡು ಹೋದರು ?

Sri H. SIDDAVEERAPPA.—Information was received by the Sub-Inspector of Krishnarajanagar that this man was involved in a case in Malavalli. ಯಾವುದೋ ರಾಸಿನ ಕಳುವಿನ ಸಂಬಂಧದಲ್ಲಿ ಅವನನ್ನು ಕರೆದುಕೊಂಡು ಹೋದರು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅವನು ಆತ್ಮಹತ್ಯ ಮಾಡಿಕೊಂಡನೆಂದು ಹೇಳಿದ್ದೀರಿ. ಆದಲ್ಲ; ಇದಕ್ಕೆ ಪೋಲೀಸಿನವರ third degree methods ಕಾರಣವಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಮ್ಯಾಜಿಸ್ಟ್ರೇಟರೇ inquest proceedings ಮಾಡಿದ್ದಾರೆ. ಈ quasi judicial-proceedings ಕೂಡ ಆಗಿರುತ್ತವೆಂಬುದು ತಮಗೇ ಗೊತ್ತಿದೆ. ಅಲ್ಲದೆ ಸೀನಿಯರ್ ಸರ್ಜನ್ನರವರೂ ಪರೀಕ್ಷೆ ಮಾಡಿ ಇದು Homicidal ಆಗಿದ್ದೇ ಅಥವಾ Suicidal ಆಗಿದ್ದೇ ಎಂಬ ಬಗ್ಗೆ ವರದಿಮಾಡಿದ್ದಾರೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಆತ ಆತ್ಮಹತ್ಯ ಮಾಡಿಕೊಂಡು ಬಂದು ಅಲ್ಲೇ ಮಲಗಿದ್ದನೇ ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಹಿಂದೆ ಎಷ್ಟು ದಿವಸ ಆತ ಲಾಕಪ್ಪಿನಲ್ಲಿದ್ದ ?

ಶ್ರೀ ಎಚ್. ಸಿದ್ದವೀರಪ್ಪ.—ಹಿಂದಿನ ಸಾಯಂಕಾಲ ಅಲ್ಲಿಗೆ ಬಂದಿದ್ದ. ಅವತ್ತು ರಾತ್ರಿ ಸತ್ತುಹೋದ.

ಶ್ರೀ ಜೆ. ಮಹಮ್ಮದ್ ಇಮಾಂ.—ಅವನಾಗಿಯೇ ಪೋಲೀಸಿನವರ ಹತ್ತಿರಕ್ಕೆ ಬಂದನೇ ?

Sri H. SIDDAVEERAPPA.—As I have already submitted, he was brought there under police surveillance; he was not arrested.

Sri J. MOHAMED IMAM.—When he was under surveillance was it not the duty of the police to see that he was properly protected and that he did not commit suicide under such circumstances ?

Sri H. SIDDAVEERAPPA.—Nobody could ever envisage that he would commit suicide in the dead of night.

Sri J. MOHAMED IMAM.—Was there a police constable or any body having surveillance on him; was he not in police lock-up or was he left alone by himself ?

Sri H. SIDDAVEERAPPA.—Surveillance is quite different from being under custody and arrest.